ನಿಮಿತ್ತವಾಗಿ ತರಗತಿಯ ಪಾಠದಲ್ಲಿ ಬರುವ ಹಲವು ಸಾಮಗ್ರಿಗಳನ್ನು ಅಲ್ಲಿ ಕೊಂಡುಕೊಳ್ಳುವಂತೆ ಮಕ್ಕಳಿಗೆ ಸೂಚಿಸುತ್ತಿದ್ದರು. ಜೆರೆಕ್ಸ್ ಸೌಲಭ್ಯವಿದ್ದ ಆ ಅಂಗಡಿಯಲ್ಲಿ ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್ ತಯಾರಿಸಲು ಬೇಕಾದ ಶಿವಾಜಿ, ಸಾವರ್ಕರ್, ಭಾರತಾಂಬೆಯ ಫೋಟೋಗಳಿಗಾಗಿ ಅಲ್ಲಿ ದುಂಬಾಲು ಬೀಳುತ್ತಿದ್ದರು.



ಟಿಪ್ಪುವಿನ ಎಂಟನೇ ತರಗತಿಯಲ್ಲಿದ್ದ ಶಿವಕುಮಾರನೆಂಬ ಹುಡುಗ ತನ್ನ ಹೆಸರಿಗೆ ಹೊಂದುವಂತೆ ಶಿವಾಜಿಯ ಫೋಟೋವನ್ನು ಅಂಟಿಸಿಕೊಂಡಿದ್ದ. ಇದನ್ನು ಕಂಡ ಟಿಪ್ಪು ಒಂದು ದಿನ ತನ್ನ ಅಜ್ಜಿಯ ಬಳಿ ಹತ್ತು ರೂಪಾಯಿ ಪಡೆದುಕೊಂಡು ಬಂದು ದೇಶಭಕ್ತಿ ಸ್ಟೋರ್‌ನಲ್ಲಿ ಟಿಪ್ಪು ಸುಲ್ತಾನ್‌ದು ಸ್ಟಿಕ್ಕರ್ ಕೊಡ್ರಿ ಎಂದು ಕೇಳಿದ್ದಾನೆ. ಹರಿದುಬಿದ್ದ ದೇಶ ಭಕ್ತ ಕೂಡಲೆ ಟಿಪ್ಪುವಿನ ದೇಶದ್ರೋಹದ ಬಗ್ಗೆ ಲೆಕ್ಚರ್ ಕೊಡಲು ಪ್ರಾರಂಭಿಸಿದ್ದಾನೆ. ಅದು ಎಷ್ಟು ದೀರ್ಘವಾಗೆಂದರೆ ಮಧ್ಯಾಹ್ನದ ಬೆಲ್ ಹೊಡೆದರೂ ಒಳಗೋಗಲು ಬಿಡದಷ್ಟು. ಕೊನೆಯದಾಗಿ ಅಂಗಡಿಯಾತ ನಿನ್ನ ಹೆಸರೇನು ಎಂದು ಕೇಳಿದ್ದಾನೆ. ಅವಸರದಲ್ಲಿದ್ದ ಹುಡುಗ ಟಿಪ್ಪು ಸುಲ್ತಾನ್ ಎಂದು ಹೇಳಿ ಓಡಿ ಹೋಗಿದ್ದಾನೆ. ದೇಶಭಕ್ತ, ಹುಡುಗ ನನ್ನನ್ನು ಕೆಣಕಲು ಹೀಗೆ ಹೇಳಿದ್ದಾನೆಂದು ಬಗೆದನೋ ಅಥವ ಅವನ ಹೆಸರು ಅದೇ ಇರಬೇಕೆಂಬ ತೀರ್ಮಾನಕ್ಕೆ ಬಂದನೋ ಅಂತೂ ಅಂದಿನಿಂದ ಅವನಮೇಲೊಂದು ಕಣ್ ಮಡಗಿದ್ದ.

ಇದಾದ ಕೆಲವೇ ದಿನಕ್ಕೆ ಆ ದೇಶಭಕ್ತನಿಗೆ ಬುದ್ದೇರ ಸ್ಕೂಲಿಗೆ ಹೋಗುವ ಅವಕಾಶ ಒದಗಿಬಂತು. ದೇಶ ಪ್ರೇಮಿಯೊಬ್ಬರ ಹುಟ್ಟುಹಬ್ಬ ಆಚರಿಸಲೆಂದು ಶಾಲೆಗೆ ಬಂದಿದ್ದ ಆತ ಅಂದು ಬೇಕಂತನೆ 'ಟಿಪ್ಪು' ವಿಷಯ ಎತ್ತಿಕೊಂಡು ಆತನೊಬ್ಬ ಹಿಂದೂ ದ್ರೋಹಿ, ಮತಾಂಧ, ಕೊಡಗು ಮತ್ತು ಚಿತ್ರದುರ್ಗದಲ್ಲಿ ನಮ್ಮವರನ್ನ ಕೊಂದಿದ್ದಾನೆ ಎಂದು ಹೇಳಿ ನಿಮಗೆ ದೇಶದ ಮೇಲೆ ಭಕ್ತಿ ಇದ್ದರೆ ಟಿಪ್ಪುನನ್ನು ಮತ್ತು ಆತನ ಧರ್ಮದವರನ್ನ ವಿರೋಧಿಸಬೇಕು ಎಂದು ಶರಾ ಬರೆದ. ಭಾಷಣ ಭಾಷಣವಾಗೆ ಇದ್ದರೆ ಏನೂ ಸಮಸ್ಯೆ ಇರುತ್ತಿರಲಿಲ್ಲ. ಬುದ್ದೇರ ಸ್ಕೂಲಿನ ವಿದ್ಯಾರ್ಥಿಗಳೆಲ್ಲರೂ ಅಂದಿನಿಂದ ತಮ್ಮ ಸಹಪಾಠಿ ಟಿಪ್ಪುನನ್ನು 'ದೇಶದ್ರೋಹಿ' ಎಂದು ಅಡ್ಡ ಹೆಸರಿನಿಂದ ಕರೆಯತೊಡಗಿದರು.

ಹೊಸದಾಗಿ ನಾಮಕರಣಗೊಂಡ ಅಡ್ಡ ಹೆಸರನ್ನ ತಿಂಗಳಾನುಗಟ್ಟಲೆ ತಡೆದುಕೊಂಡ ಟಿಪ್ಪು ಇತ್ತೀಚೆಗೆ ಸ್ಕೂಲಿಗೆ ಬರಲೂ ಬೇಸರಿಸಿಕೊಳ್ಳುತ್ತಿದ್ದ. ರೋಸಿ ರೋಸಿ ಸಾಕಾಗಿ ಕೊನೆಗೊಂದು ದಿನ ಅಜ್ಜಿ ನಂಜವ್ವನ ಬಳಿ ಹೇಳಿಕೊಂಡ. ಪರಿಣಾಮವಾಗಿ ಅಜ್ಜಿ ನಂಜವ್ವ 'ಅದ್ಯಾವ ನನ್ನ ನೊಲೆಷ್ಯಾಲೆ ನೋಡ್ತಿನಿ' ಎಂದು ಸೆರಗ ಸೊಂಟುಕ್ಕೆ ಸಿಗಿಸ್ಕೆಂಡು ಬಂದ್ಲು. ಅಡ್ಡಗಟ್ಟಿದ ನಾಮಧಾರಿ ಕನ್ನಡದ ಮೇಷ್ಟ್ರು 'ಮೊದ್ಲು ಕೋರ್ಟಿಗೋಗಿ ಆ ಹೆಸರ್ನ ಬದ್ಲಾಯಿಸೋಗಮ್ಮ, ಆಮೇಲೆ ಬುದ್ಧಿ ಕಲಿಸಿವಂತೆ' ಎಂದು ಶಾಲೆಯ ಪರವಹಿಸಿದ. ಸಂಕಟವನ್ನ ತೋಡಿಕೊಳ್ಳಲಾಗದ ನಂಜವ್ವ ಗೊಣಗಿಕೊಂಡು ಊರದಾರಿ ಹಿಡಿದಳು.

ಇದಾಗಿ ಎರಡು ತಿಂಗಳಿಗೆ ಹುಣುಸೆಮರ ಬಡ್ಡಕೋಗಿದ್ದ ದುರ್ಗಯ್ಯಿಂಗೆ ಒಂದ್ ಮಧ್ಯಾಹ್ನ ಮಾದಾಪುರದಿಂದ ಫೋನ್ ಬಂತು. ಈ ಕಡೆಯಿಂದ